ಸೃಜನಿ
SRUJANI: Indian Journal of Innovative Research and Development (SIJIRD)
Volume-5 Issue- 4, September - October 2026, Pp. 165-171
Bi-Monthly, Peer-Reviewed, Open Access, Indexed Journal
I S S N: 2583-3510
SIRDF JOURNALS
editor@srujani.in
www.srujani.in

ಅ. ನ. ಕೃಷ್ಣರಾಯ ಅವರ ಕಥೆಗಳಲ್ಲಿ ವಿಧವಾ ಸಮಸ್ಯೆಯ ಸ್ವರೂಪ

ಶ್ರೀನಿವಾಸ ಎನ್. ಹೆಚ್
ದಾಸರಹಳ್ಳಿ, ಹೊಳಲ್ಕೆರೆ, ಚಿತ್ರದುರ್ಗ

Abstract:
ಪ್ರಗತಿಶೀಲ ಕನ್ನಡ ಸಾಹಿತಿ ಅ.ನ.ಕೃಷ್ಣರಾಯ ಅವರ ಸಣ್ಣಕಥೆಗಳಲ್ಲಿ ವಿಧವೆಯರ ಬದುಕಿನ ಸ್ವರೂಪ ಮತ್ತು ಅವರು ಎದುರಿಸುವ ಸಾಮಾಜಿಕ ಸವಾಲುಗಳನ್ನು ಈ ಸಂಶೋಧನಾ ಲೇಖನವು ವಿಶ್ಲೇಷಿಸುತ್ತದೆ. ವಿಶೇಷವಾಗಿ 'ಮುಂದೇನು ಗತಿ' ಮತ್ತು 'ಸಾವಿತ್ರಿಯ ಸೌಭಾಗ್ಯ' ಕಥೆಗಳನ್ನು ಕೇಂದ್ರವಾಗಿಟ್ಟುಕೊಂಡು ಬಾಲವಿಧವೆಯರು ಅನುಭವಿಸುವ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಸಂಕಟಗಳನ್ನು ಅಧ್ಯಯನ ಮಾಡಲಾಗಿದೆ. ಬಾಲ್ಯವಿವಾಹ, ಕಠಿಣ ಸಂಪ್ರದಾಯಗಳು, ಮೂಢನಂಬಿಕೆಗಳು, ಲಿಂಗ ತಾರತಮ್ಯ ಮತ್ತು ಸಾಮಾಜಿಕ ನಿರ್ಬಂಧಗಳು ಮಹಿಳೆಯರ ಬದುಕಿನ ಮೇಲೆ ಬೀರುವ ಪರಿಣಾಮಗಳನ್ನು ಇಲ್ಲಿ ವಿವರಿಸಲಾಗಿದೆ. ಸೀತೆ ಮತ್ತು ಸಾವಿತ್ರಿಯರ ದುರಂತ ಜೀವನಾನುಭವಗಳ ಮೂಲಕ ಕುಟುಂಬ ಮತ್ತು ಸಮಾಜವು ವಿಧವೆಯರೊಂದಿಗೆ ನಡೆದುಕೊಳ್ಳುವ ಅಮಾನವೀಯ ರೀತಿಯನ್ನು ಲೇಖಕರು ಅನಾವರಣಗೊಳಿಸಿದ್ದಾರೆ. ವಿಧವಾ ವಿವಾಹದ ಅಗತ್ಯತೆ, ಸಾಮಾಜಿಕ ಸುಧಾರಣೆ, ಲಿಂಗ ಸಮಾನತೆ ಹಾಗೂ ಮಹಿಳೆಯರನ್ನು ಶೋಷಿಸುವ ಅನಿಷ್ಟ ಸಂಪ್ರದಾಯಗಳ ನಿರ್ಮೂಲನೆಯ ಮಹತ್ವವನ್ನು ಈ ಅಧ್ಯಯನವು ಪ್ರತಿಪಾದಿಸುತ್ತದೆ.

Keywords: *ಅ.ನ.ಕೃಷ್ಣರಾಯ, ವಿಧವೆಯರ ಬದುಕು, ಬಾಲ್ಯವಿವಾಹ, ವಿಧವಾ ವಿವಾಹ, ಸಾಮಾಜಿಕ ಸುಧಾರಣೆ.*

ಪೀಠಿಕೆ

ಹತ್ತೊಂಬತ್ತನೇ ಶತಮಾನದ ಐದನೆಯ ದಶಕದ ಆಸುಪಾಸಿನಲ್ಲಿ ನಮ್ಮ ಸಮಾಜ ಎದುರಿಸುತ್ತಿದ್ದ ಬಹುದೊಡ್ಡ ಸಾಮಾಜಿಕ ಪಿಡುಗು ಎಂದರೆ ವಿಧವಾ ಸಮಸ್ಯೆ. ಬಾಲ್ಯ ವಿವಾಹದಿಂದ ವಿವಾಹ ಬಂಧನಕ್ಕೆ ಒಳಗಾಗುತ್ತಿದ್ದ ಸ್ತ್ರೀಯರು ನಾನಾ ಕಾರಣಗಳಿಂದ ತಮ್ಮ ಪತಿಯನ್ನು ಕಳೆದುಕೊಂಡು ವಿಧವೆಯರಾಗುತ್ತಿದ್ದರು. ತಮ್ಮ ಚಿಕ್ಕ ವಯಸ್ಸಿನಲ್ಲೇ ವೈಧವ್ಯವನ್ನು ಹೊಂದಿ ಸಮಾಜ ಹಾಕಿಕೊಟ್ಟ ಕಟ್ಟುಕಟ್ಟಲೆಗಳಲ್ಲಿ ಜೀವನವನ್ನು ಕಳೆಯಬೇಕಾಗಿತ್ತು. ಅಲ್ಲದೆ ತಮ್ಮ ವಯೋಸಹಜವಾದ ಆಸೆ–ಆಕಾಂಕ್ಷೆಗಳನ್ನು ಬದಿಗಿಟ್ಟು ನರಕದ ಜೀವನವನ್ನು ಸಾಗಿಸಬೇಕಿತ್ತು. ತಲೆಗೆ ಹೂ ಮುಡಿಯುವಂತಿರಲಿಲ್ಲ, ಹಣೆಗೆ ತಿಲಕವಿಡುವಂತಿರಲಿಲ್ಲ, ಬಿಳಿಯ ಬಟ್ಟೆಯನ್ನು ಧರಿಸಿಯೇ ಬದುಕಬೇಕಿತ್ತು. ಅಲ್ಲದೆ ಸಮಾಜದಲ್ಲಿ ಅಪಶಕುನದ ಸಂಕೇತವಾಗಿ ಬಾಳಬೇಕಿತ್ತು. ಇಂತಹ ಸಾಮಾಜಿಕ ಪಿಡುಗಿನ ವಿರುದ್ಧ ಅನೇಕ ಸಮಾಜ ಸುಧಾರಕರು ಜಾಗೃತಿಯನ್ನು ಮೂಡಿಸಿದ ನಂತರ ಸಲ್ಪಮಟ್ಟಿಗೆ ಸುಧಾರಣೆಯನ್ನು ಕಂಡಿತು. ಆದರೂ ಕೆಲವು ಸಂಪ್ರದಾಯದ ಕುಟುಂಬಗಳು ಈ ಅನಿಷ್ಟ ಪದ್ಧತಿಯನ್ನು ಹಾಗೆಯೇ ಮುಂದುವರಿಸಿಕೊಂಡು ಬಂದಿವೆ. ಇದು ಇಡೀ ನಾಗರಿಕ ಸಮಾಜ ತಲೆತಗ್ಗಿಸುವಂತಹ ವಿಷಯವಾಗಿದೆ.

Please cite this article as: ಶ್ರೀನಿವಾಸ, ಎನ್. ಹೆಚ್. (2026). ಅ. ನ. ಕೃಷ್ಣರಾಯ ಅವರ ಕಥೆಗಳಲ್ಲಿ ವಿಧವಾ ಸಮಸ್ಯೆಯ ಸ್ವರೂಪ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(4), 165–171

ಈ ರೀತಿಯ ಸಾಮಾಜಿಕ ಸಮಸ್ಯೆಯಾದ ವಿಧವೆಯರ ಜೀವನವನ್ನು ವಸ್ತು ವಿಷಯವಾಗಿಟ್ಟುಕೊಂಡು ಪ್ರಗತಿಶೀಲ ಸಾಹಿತಿಯಾದ ಅ.ನ.ಕೃಷ್ಣರಾಯರು ಕಥೆಗಳನ್ನು ರಚಿಸಿದ್ದಾರೆ. ಅವರ 'ಮುಂದೇನು ಗತಿ', 'ಸಾವಿತ್ರಿಯ ಸೌಭಾಗ್ಯ' ಕಥೆಗಳನ್ನು ಕೇಂದ್ರವಾಗಿಟ್ಟುಕೊಂಡು ವಿಧವಾ ಸಮಸ್ಯೆಯ ಸ್ವರೂಪವನ್ನು ಚರ್ಚಿಸುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.

ಅ.ನ.ಕೃಷ್ಣರಾಯ ಅವರ **'ಮುಂದೇನು ಗತಿ'** ಕಥೆಯು ಸ್ತ್ರೀ ಪಾತ್ರ ನಿರೂಪಣೆಯಿಂದ ಕೂಡಿದೆ. ವಿಧವೆಯಾದ ಸೀತೆಯ ಕರುಣಾಜನಕ ಕಥೆಯು ಚಿತ್ರಣಗೊಂಡಿದೆ. ತಂದೆ–ತಾಯಿಯರ ಮಮತೆಯ ಕುಡಿಯಾಗಿ ಬೆಳೆದಿದ್ದ ಸೀತೆ ತನ್ನ ಹನ್ನೆರಡನೇ ವಯಸ್ಸಿಗೆ ವಿವಾಹಕ್ಕೆ ಒಳಪಡಬೇಕಾಗುತ್ತದೆ. ವಿವಾಹವಾದ ನಂತರ ಪೂರ್ಣ ಸ್ತ್ರೀತ್ವವನ್ನು ಪಡೆದುಕೊಳ್ಳುವ ಸೀತೆಯು ತನ್ನ ಗಂಡನ ಮನೆಯನ್ನು ಸೇರಬೇಕಾಗುತ್ತದೆ. 'ನಂದಗೋಕುಲ ದಂತಹ ಗೃಹ, ಪ್ರಣಯರತ್ನವೋ ಎನ್ನುವಂತಹ ಪತಿ, ಮಮತಾ ಮೂರ್ತಿಗಳೋ ಎಂದೆನಿಸುವ ಅತ್ತೆ–ಮಾವಂದಿರು'... ಇದು ಸುಖ ಸಾಮ್ರಾಜ್ಯದ ಸವಿಯಾಗಿ ಕಂಡುಬರುತ್ತದೆ. ಆದರೆ ತನ್ನ ಗಂಡನಿಗೆ 'ಗುಪ್ತರೋಗದ' ಸಮಸ್ಯೆಯು ಇರುವುದನ್ನು ತಿಳಿದ ಸೀತೆ ನಿತ್ಯವೂ ನೊಂದುಕೊಳ್ಳುತ್ತಿರುತ್ತಾಳೆ. ಈ ನಡುವೆ ಒಂದು ದಿನ ಸೀತೆಯ ಗಂಡನಾದ ಸ್ವಾಮಿಯು ಇಹಲೋಕವನ್ನು ತ್ಯಜಿಸುತ್ತಾನೆ. 'ಅಂದಿನಿಂದ ನಾನು ವಿಧವೆಯಾದೆ' ಎಂದು ದುಃಖಿತಳಾಗುತ್ತಾಳೆ.

ವಿಧವೆಯರ ಜೀವನ, ಅವರು ಅನುಭವಿಸುವ ನೋವು, ಸಂಕಟಗಳನ್ನು ಸೀತೆಯು ಓದುಗರ ಕಣ್ಣಿಗೆ ಕಟ್ಟುವಂತೆ, ಅವರ ಕರುಳಿರಿಯುವಂತೆ ಈ ರೀತಿ ನಿರೂಪಿಸುತ್ತಾಳೆ. 'ವಿಧವೆ ಅಂದರೆ ರೂಪವನ್ನು ಕುರೂಪ ಮಾಡಿಕೊಂಡು ನೊಂದು–ಬೆಂದು ಸರ್ವರ ಧಿಕ್ಕಾರಕ್ಕೂ ಪಾತ್ರಳಾಗಿ, ಸಮಾಜದ ಅಮಂಗಳದ ಕುರುಹಾಗಿ ನಿಲ್ಲುವ ಒಂದು ಕ್ಷುದ್ರ ಜಂತು. 'ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎಂದು ಹಾಡಿದ ಮನುದೇವನಿಗೆ ಭಾರತ ವರ್ಷದಲ್ಲಿ ವಿಧವೆಯೆಂದರೆ ವಿಕರ್ಷಣೆಯನ್ನೂ, ಅಸಹ್ಯತೆಯನ್ನೂ ಹುಟ್ಟಿಸುವ ವಸ್ತು. ನನ್ನ ವೈಧವ್ಯ ಕಾಲದಲ್ಲಿ ಅನುಭವಿಸಿದ ಕಾಯ, ಮನೋಕ್ಲೇಶವನ್ನು ವರ್ಣಿಸ ಹತ್ತಿದರೆ ಕಲ್ಲು ಕೂಡ ಕರಗುತ್ತದೆ' ಎಂದು ಹೇಳುವ ಸೀತೆಯ ಧ್ವನಿಯಲ್ಲಿ ವಿಧವೆಯರ ನೋವು ಸಂಕಟಗಳ ಪ್ರಖರತೆಯು ಕಂಡುಬರುತ್ತದೆ. ಹಾಗಾಗಿಯೇ "ವಿಧವೆಯಾದ ಸ್ತ್ರೀಗೆ ಅಂಟಿಕೊಂಡ ಶಾಪ, ಬಂದೊದಗಿದ ತಾಪ ಅವಳ ಬದುಕನ್ನು ನರಕ"[1] ಮಾಡುತ್ತದೆ ಎಂದು ಹೇಳಿರುವುದು. ಇಲ್ಲಿ ಭಾರತೀಯ ಸಮಾಜದಲ್ಲಿ ಸ್ತ್ರೀಯ ಸುತ್ತ ಹೆಣೆದುಕೊಂಡಿರುವ ಅರ್ಥಹೀನ ಕಟ್ಟುಕಟ್ಟಳೆಗಳು ಆಕೆಯನ್ನು ಮಾನಸಿಕವಾಗಿ, ದೈಹಿಕವಾಗಿ ಯಾವ ರೀತಿಯಲ್ಲಿ ಹಿಂಸಿಸುತ್ತವೆ ಎಂಬುದು ಚಿತ್ರಣಗೊಂಡಿದೆ.

ಸೀತೆಯು ತನ್ನ ಗಂಡನ ಮನೆಯಿಂದ ತವರುಮನೆಗೆ 'ಅಮಂಗಳದ ಭೂತದಂತೆ, ಕೂಳಿನ ಯಾಚಕಳಂತೆ, ಕೊಚ್ಚೆಯಲ್ಲಿ ಬಿದ್ದ ತರಗೆಲೆಯಂತೆ' ಬಾಲವಿಧವೆಯಾಗಿ ಬರುತ್ತಾಳೆ. ತನ್ನ ಸ್ವಂತ ಮನೆಯವರಿಗೆ ಅಪಶಕುನದ ಪ್ರತಿರೂಪದಂತೆ ಕಂಡು, ಕೋಣೆಯಿಂದ ಹೊರ ಬರಲಾರದೆ ತನ್ನ ಮದುವೆಗೂ ಮುಂಚೆ ನುಡಿಸುತ್ತಿದ್ದ ವೀಣೆಯನ್ನು ನುಡಿಸಲು ಪ್ರಾರಂಭಿಸುತ್ತಾಳೆ. ಆಗ ಮೊದಲು ನುಡಿಸುತ್ತಿದ್ದ ಕೀರ್ತನೆಗಳು ಸೀತೆಯ ಅಂತಸ್ತಾಪವನ್ನಡಗಿಸುವ ಅಮೃತದ ಕುಂಭಗಳಾಗಿ ಕಂಡುಬರುತ್ತವೆ. ಸೀತೆಯು ನುಡಿಸುವ ವೀಣೆಯ ನುಡಿಗಳು ಮನೆಯವರ ಹೃದಯವನ್ನು ಕೊಯ್ಯುವ ಗರಗಸದಂತೆ ಕಂಡುಬರುತ್ತವೆ. ಅಂತಹ ಸಂದರ್ಭದಲ್ಲಿ ಸೀತೆಯನ್ನು ಪೋಷಿಸಿದ ಅಜ್ಜಿಯು ಸಹ 'ಮದುವೆಯಾದ ಮೂರ್ವರ್ಷದ್ವಳ್ಗಾಗಿ ಗಂಡನ್ನುಂಡಿಗಿಕ್ಕಿ ತಿಂದ್ಮೂತ ಹೆಮ್ಮಾರೀಗೆ ವೀಣೆಯೊಂದು ಕೇಡು' ಎಂದು ಹೇಳುವ ಮಾತುಗಳು ನಿತ್ಯವೂ ಗಾಯನದ ಪಲ್ಲವಿಯಾಗುತ್ತವೆ. ಈ ರೀತಿಯ ಮನಸ್ಥಿತಿಯನ್ನು ಹೆದರಿಸಲು ತಂದೆ–

ತಾಯಿಯರಿಗೆ ಸಾಧ್ಯವಾಗುವುದಿಲ್ಲ. ಕಾರಣ ತಾಯಿಗೆ ತನ್ನ ಅತ್ತೆಯ ಮೇಲಿನ ಪ್ರೀತಿ ಮತ್ತು ಗೌರವ. ಇನ್ನೂ ತಂದೆಗೆ ಮಾತೃವಾತ್ಸಲ್ಯ. ಈ ರೀತಿಯ ಭೀತಿ ಭಕ್ತಿಯಿಂದ ಸೀತೆಯು ನರಳಬೇಕಾಗುತ್ತದೆ.

ಸೀತೆಯು ತನ್ನ ಅಸಹನೀಯತೆಯಿಂದ ಮತ್ತು ವಯೋಸಹಜವಾದ ಆಸೆ–ಆಕಾಂಕ್ಷೆಯಿಂದಾಗಿ ಪಕ್ಕದ ಮನೆಯ ವ್ಯಕ್ತಿಯ ಜೊತೆಗೆ ಯಾವ ರೀತಿಯ ನೀತಿ, ಜಾತಿ, ಮಾನ, ಧನಗಳನ್ನು ಪರಿಗಣಿಸದೆ ಅನುರಕ್ತಳಾಗುತ್ತಾಳೆ. ಈ ಸಮಯದಲ್ಲಿ ಸೀತೆಯಾಡುವ ಮಾತುಗಳು 'ನಮ್ಮ ಹೃದಯಗಳು ಒಂದಾದವು. ಕೌಶಲದಿಂದ ಬರೆದ ಚಿತ್ರ ಮಸಿಯ ಪಾಲಾಯಿತು. ಹಿಂದೂಧರ್ಮದ ಸುವರ್ಣ ಶೃಂಖಲೆಗಳನ್ನು ಕಿತ್ತೊಗೆದು ಹೃದಯದಲ್ಲಡಕವಾಗಿದ್ದ ಪತಿಪತ್ನಿಯ ಆದರ್ಶ ಭಾವಕ್ಕೆ ದಹನದ ಸಂಸ್ಕಾರ ಮಾಡಿದೆ. ಹಿಂದೂ ಸ್ತ್ರೀಯರ ಪಾತಿವ್ರತ್ಯವೆಂಬ ಕಲ್ಪನೆಯ ಮೌಢ್ಯವನ್ನು ಹೊರತೋರಿದೆ. ಸಮಾಜವೇ ಇದಕ್ಕಾಗಿ ನೀನು ನನ್ನನ್ನು ಶಪಿಸುವಿಯಲ್ಲವೇ ಶಪಿಸು, ಶಪಿಸು... ನಿನ್ನ ಶಾಪದಲ್ಲಿಯೇ ನೀನು ಹಾಳಾಗುವೆ' ಮುಂತಾದವು. ಇಲ್ಲಿಯವರೆವಿಗೂ ಹಿಂದೂಧರ್ಮದಲ್ಲಿ ಪಾಲಿಸಿಕೊಂಡು ಬಂದಿದ್ದ 'ಪತಿವ್ರತೆ' ಎನ್ನುವುದು ಒಂದು ರೀತಿಯ ಕಲ್ಪನೆಯಾಗಿ, ಅರ್ಥವಿರದ ಮೌಢ್ಯತೆಯಾಗಿರುತ್ತದೆ. ಈ ಕಾರಣಕ್ಕಾಗಿಯೇ ವಿಧವೆಯರ ಜೀವನ ನರಕವಾಗುವುದು. ಹಾಗಾಗಿಯೇ ಸೀತೆಯಂತೆ ಪಾತಿವ್ರತ್ಯದ ಮೌಢ್ಯತೆಯನ್ನು ಕಿತ್ತೆಸೆದವರನ್ನು ಸಮಾಜವು ಹಾದಿ ತಪ್ಪಿದವರು, ಕೆಟ್ಟವರು ಎಂದು ಬಿಂಬಿಸುತ್ತದೆ. ಇಂತಹವರ ಜೀವನವನ್ನು ಪುರಸ್ಕರಿಸದ, ಬೆಂಬಲಿಸದ ಸಮಾಜವೇ ನೀನು ಶಪಿಸು, ಅಲ್ಲದೆ ಆ ರೀತಿಯ ಶಾಪದಲ್ಲಿಯೇ ನೀನು ಸಹ ಹಾಳಾಗು ಎಂದು ಕಥೆಯಲ್ಲಿ ಚಿತ್ರಣಗೊಂಡಿದೆ. ಇಲ್ಲಿ ಧರ್ಮ ಮತ್ತು ಸಂಪ್ರದಾಯದ ಹೆಸರಿನಲ್ಲಿರುವ ಎಷ್ಟೋ ಆಚರಣೆಗಳು, ಪದ್ಧತಿಗಳು ಮತ್ತು ನಂಬಿಕೆಗಳು ಸ್ತ್ರೀಯರಿಗೆ ಸಂಕಷ್ಟಗಳಾಗಿವೆ. ಈ ರೀತಿಯ "ಸಂಕಷ್ಟಗಳನ್ನು ದಹನದ ಸಂಸ್ಕಾರ ಮಾಡಬೇಕು"[2] ಎಂದು ಹೇಳುತ್ತಾರೆ.

ಸೀತೆಯೊಂದಿಗೆ ಅನುರಕ್ತನಾದ ಪಕ್ಕದ ಮನೆಯ ವ್ಯಕ್ತಿಯು ಆಕೆಯನ್ನು ಪಾಂಡಿಚೇರಿಗೆ ಕರೆದುಕೊಂಡು ಹೋಗುತ್ತಾನೆ. ಇಲ್ಲಿ ತಿರಸ್ಕಾರದಿಂದ ನೋಡುವ ಮನೆಯವರಿಗಿಂತ ಆತನೇ ಸರ್ವಶ್ರೇಷ್ಠ ಎಂದುಕೊಂಡ ಸೀತೆಯು ಆತನ ಜೊತೆ ಅಲ್ಲಿ ಸಂಸಾರ ಮಾಡುತ್ತಾಳೆ. ಒಂದು ವರ್ಷದ ನಂತರ ಮಗುವೊಂದು ಜನಿಸುತ್ತದೆ. ದಿನಗಳು ಉರುಳಿದ ಹಾಗೆ ತಾನು ನಂಬಿ ಅನುರಕ್ತೆಯಾಗಿ ಬಂದಿದ್ದ ಗಂಡಸಿನ ನೂರಾರು ಸಾಲಬಾಧೆಗಳು, ಅವಾಂತರಗಳು ತಿಳಿಯುತ್ತವೆ. ಅಲ್ಲದೆ ಆತ ಈಗಾಗಲೇ ವಿವಾಹಿತನೆಂಬ ಸತ್ಯ ತಿಳಿಯುತ್ತಲೇ ತನ್ನ ಅಂತಃಕರಣದಲ್ಲಿಯೇ ಕುಸಿಯುತ್ತಾಳೆ. ತಮಗೆ ಹುಟ್ಟಿದ ಮಗುವನ್ನು ಪೋಷಿಸಲಾಗದ ಸ್ಥಿತಿಯನ್ನು ತಲುಪಿ ಭಿಕ್ಷೆ ಬೇಡುವಂತಹ ಪರಿಸ್ಥಿತಿಯನ್ನು ಸೀತೆ ತಲುಪುತ್ತಾಳೆ. ನಾನು ಜೊತೆಯಾಗಿ ಬಂದ ಗಂಡ ಬಿಟ್ಟು ಹೋಗಿದ್ದಾನೆಂದುಕೊಂಡಿದ್ದರೆ, ಅವನು ಸತ್ತುಹೋಗಿರುತ್ತಾನೆ. ಈ ತರಹದ ತನ್ನ ಬದುಕಿನ ಬಗೆಗೆ ಬೇಸತ್ತ ಸೀತೆಯು ಬೇರೆ ಯಾವ ದಾರಿ ಕಾಣದೆ ತನ್ನ ಮಗುವನ್ನು ಹೇಗೋ ತವರುಮನೆಗೆ ತಲುಪಿಸುವ ವ್ಯವಸ್ಥೆಯನ್ನು ಮಾಡಿ ತಾನು ಮಾತ್ರ ಭೋರ್ಗರೆಯುತ್ತ ಎಲ್ಲವನ್ನೂ ಆಸ್ವಾದಿಸುವ ಸಮುದ್ರದೆಡೆಗೆ ಪ್ರಯಾಣ ಬೆಳೆಸುತ್ತಾಳೆ. ಈ ಸಂದರ್ಭದಲ್ಲಿ ಸೀತೆಯು ಸಮಾಜಕ್ಕೊಂದು ಸಲಹೆ ನೀಡುತ್ತಾಳೆ. 'ಬಂಧು ಭಗಿನಿಯರೇ, ಪ್ರತಿಯೊಂದು ಮತದ ಅನುಯಾಯಿಗಳು ಮೃತ್ಯುಶಯ್ಯೆಯ ಲ್ಲಿರುವವರ ಅಂತಿಮ ಅಪೇಕ್ಷೆಯನ್ನು ಅತ್ಯಂತ ಗೌರವದಿಂದ ಆದರಿಸುವರು. ನನ್ನ ಈ ಒಂದು ಬಿನ್ನಹವನ್ನು ಆದರಿಸುವಿರಾ ಕಾಲ ಪರಿಸ್ಥಿತಿಯನ್ನರಿಯದೆ ಸಮಾಜ ಮುಖಂಡರೆನಿಸಿ ಕೊಂಡು ಮೆರೆಯುವ ಮಡೆಯರ ಮಾತಿಗೆ ಮರುಳಾಗಬೇಡಿರಿ, ನನ್ನಂತೆ ವಿಧವೆಯಾಗುವ ನಿಮ್ಮ ಕುಮಾರಿಯರನ್ನು ವೈಧವ್ಯವೆಂಬ ಕಾರಾಗಾರದಲ್ಲಿ

ಹಾಕಿ ಅವರು ಕುಟಿಲೋಪಾಯಗಳಿಂದ ತಮ್ಮ ನಿವೃತ್ತಿ ಮಾರ್ಗವನ್ನು, ಆಶಾ ಸಾಫಲ್ಯ ಮಾರ್ಗವನ್ನು ಅರಸುತ್ತ ಹೋಗುವಂತೆ ದೃಢಾಂಗನಾದ ತರುಣನಿಗಿತ್ತು ವಿವಾಹ ಮಾಡಿ. ನಿಮಗೂ ನಿಮ್ಮನ್ನೇ ನಂಬಿರುವ ಬಡ ಬಾಲಿಕೆಯರಿಗೂ ಇದರಿಂದ ಕಲ್ಯಾಣವಾಗುತ್ತದೆ. ಇದಕ್ಕೆ ವಿಘ್ನಕಾರಿಯಾಗಿ ಒದಗುವ ರೂಢಿಯಾಚರಣೆ, ಜಾತಿ–ಮತಗಳ ಪ್ರತಿಬಂಧಗಳನ್ನು ಗಣನೆಗೆ ತಂದುಕೊಳ್ಳದೆ ನಿಮ್ಮ ನಂಬಿಕೆಯನ್ನು ಕಾರ್ಯರಂಗದಲ್ಲಿ ತೋರಿಸಿ, ಸಭೆ ಸಮ್ಮೇಳನಗಳಲ್ಲಿ ವಿಧವಾ ವಿವಾಹದ ಮಹತ್ವವನ್ನು ಬೀರಿ ಬೊಗಳುಸನ್ನಿ ಹಿಡಿದವರಂತೆ ಕಾಣಿಸಿಕೊಳ್ಳುವುದಕ್ಕಿಂತಲೂ ಸ್ವಗೃಹ ಸುಧಾರಣೆಯ ಮೂಲಕ ಲೋಕಕ್ಕೆ ಮೇಲ್ಪಂಕ್ತಿಯಾಗುವುದೇ ಮೇಲು'. ಹೀಗೆ ನೀಡುವ ಸಂದೇಶ ಸೀತೆಯ ನೊಂದ ಮನಃಸ್ಥಿತಿಯನ್ನು ತೋರಿಸುತ್ತದೆ. ಸಮಾಜದಲ್ಲಿ ಒಂದು ಸ್ತ್ರೀಯನ್ನು ನೋಡುವ, ನಡೆಸಿಕೊಳ್ಳುವ ರೀತಿಯನ್ನು ಈ ಕಥೆಯು ಚಿತ್ರಿಸುತ್ತದೆ. ಹೆಣ್ಣುಮಕ್ಕಳನ್ನು ಹೆತ್ತ ತಂದೆ ತಾಯಿಯರಿಗೆ, ಆಚಾರ–ವಿಚಾರ, ನಂಬಿಕೆ, ಪದ್ಧತಿಗಳಿಂದ ನಂಬಿರುವ ಸಂಪ್ರದಾಯಕ್ಕೆ ಈ ಕಥೆಯು ಮಾದರಿಯ ನೀತಿಯನ್ನು ಕೊಡುತ್ತದೆ.

ಈ ಕಥೆಯಲ್ಲಿ ಅ.ನ.ಕೃಷ್ಣರಾಯ ಅವರು ವಿಧವೆಯರ ಜೀವನ ಮತ್ತು ವಿಧವಾ ವಿವಾಹದ ಬಗ್ಗೆ ಚಿತ್ರಿಸಿದ್ದಾರೆ. ಹೆತ್ತ ತಂದೆ–ತಾಯಿಯರು ಮಾಡುವ ತಪ್ಪು ನಿರ್ಧಾರಗಳು, ಇನ್ನು ಗಂಡ ಮತ್ತು ತಾನು ನಂಬಿಹೋದ ವ್ಯಕ್ತಿ ಮಾಡುವ ಅನ್ಯಾಯ, ಇವುಗಳಿಂದ ಸ್ತ್ರೀಯೊಬ್ಬಳು ಅನುಭವಿಸುವ ನೋವು–ಸಂಕಟಗಳು, ಯಾರಿಗೂ ಇಷ್ಟವಾಗದ ಸ್ತ್ರೀ, ಅದರಲ್ಲಿಯೂ ವಿಧವೆಯ ಬದುಕಿಗೆ ದಾರಿ ಯಾವುದು ಎನ್ನುವ ಸಂದರ್ಭದಲ್ಲಿ ಸಾವೊಂದೇ ಅವಳಿಗೆ ಪರಿಹಾರವಾಗಿ ಈ ಕಥೆಯಲ್ಲಿ ಕಂಡುಬರುತ್ತದೆ.

'ಸಾವಿತ್ರಿಯ ಸೌಭಾಗ್ಯ' ಕಥೆಯಲ್ಲಿ ಬಾಲವಿಧವೆಯಾದ ಸಾವಿತ್ರಿಯ ದುರಂತದ ಕಥೆಯು ಅಡಕವಾಗಿದೆ. 'ಮುಂದೇನು ಗತಿ' ಕಥೆಯ ಸೀತೆಯು ತನ್ನ ಕುಟುಂಬ ಮತ್ತು ಸಮಾಜಗಳೆರಡರಿಂದಲೂ ಶೋಷಣೆಗೆ ಒಳಗಾದರೆ, ಈ ಕಥೆಯಲ್ಲಿ ಸಾವಿತ್ರಿ ತನ್ನ ಕುಟುಂಬದಿಂದಲೇ ಘೋರ ನರಕವನ್ನು ಅನುಭವಿಸುತ್ತಾಳೆ. ಇದಕ್ಕೆ ಕಾರಣರಾದವರು ಮಲತಾಯಿ ಸುಬ್ಬಮ್ಮ(ರಾಯರ ಎರಡನೇ ಹೆಂಡತಿ), ಮತ್ತು ಅವಳ ತಾಯಿ ಗೌರಮ್ಮ. ಇನ್ನೊಂದು ಕಡೆ ಸಾವಿತ್ರಿ ತನ್ನ ತಮ್ಮ ಪುಟ್ಟುವಿನಲ್ಲಿ ತನ್ನೆಲ್ಲ ಸಂತೋಷವನ್ನು ಕಾಣುತ್ತಾಳೆ. ಹಾಗೆಯೇ ಪುಟ್ಟುವು ಸಹ ತನ್ನ ಅಕ್ಕ ಸಾವಿತ್ರಿಯಲ್ಲಿ ಮಮಕಾರದ ವಾತ್ಸಲ್ಯವನ್ನು ಕಾಣುತ್ತಾನೆ.

ಈ ಕಥೆಯಲ್ಲಿ ಬರುವ ಸಾವಿತ್ರಿಯು ಒಳ್ಳೆಯ ಹೆಣ್ಣುಮಗಳು, ಚೆಂದುಳ್ಳಿ ಚೆಲುವೆ, ಸಂಸ್ಕಾರವಂತೆ. ಹಾಗಾಗಿಯೇ 'ತಾನು ಸೀತೆಯ ಹಾಗಾಗಬೇಕು. ಸೀತೆಯ ಹಾಗೆ ಪತಿವ್ರತೆಯಾಗಿ, ಹುಟ್ಟಿದ ಮತ್ತು ಸೇರಿದ ಮನೆಗೂ ಕೀರ್ತಿ ತರಬೇಕೆಂದು ಅವಳು ಅಮೋಘವಾದ ಆಸೆ'ಯನ್ನು ಹೊಂದಿರುತ್ತಾಳೆ. ತಮಾಶೆಗಾಗಿ ಯಾರಾದರೂ 'ಏನೇ ಸಾತೂ, ನಿನ್ನ ಮುದುಕನಿಗೆ ಕೊಟ್ಟು ಮದುವೆ ಮಾಡ್ತಾರಲ್ಲೆ' ಎಂದು ಹೇಳಿದರೆ. ಅದಕ್ಕೆ ಸಾವಿತ್ರಿಯು 'ಹೌದಮ್ಮ ನಮ್ಮ ಬಾಳು ನೋಡಿದರೆ ನಿಮಗೆಲ್ಲಾ ನಗು ಬರುತ್ತದೆ. ಮುದುಕನೋ, ಮೋಟನೋ ಗಂಡಾನ್ನೋ ವಸ್ತು ದೇವರ ಸಮಾನ. ಅವರು ಹ್ಯಾಗೇ ಇರಲಿ ನಾವು ಚಾಕರರಂತೆ ಇರುವುದೇ ಧರ್ಮ' ಎಂದು ತುಂಬ ಗಂಭೀರವಾಗಿಯೇ ನುಡಿಯುತ್ತಿದ್ದಳು. ಇಲ್ಲಿ ಪ್ರತಿಯೊಬ್ಬ ಸ್ತ್ರೀಯು ಪತಿಧರ್ಮ ಪಾಲಿಸುವುದು ಸಂಪ್ರದಾಯವೆಂಬಂತೆ ಕಂಡುಬರುತ್ತದೆ. ಹಾಗಾಗಿಯೇ ಸಾವಿತ್ರಿಯ ಮೂಲಕ ಆ ಸಂಪ್ರದಾಯವನ್ನು ಬೆಂಬಲಿಸಲಾಗಿದೆ ಮತ್ತು ಪೋಷಿಸಿಕೊಂಡು ಮುಂದುವರಿಯುವಂತೆ ಕಾಣುತ್ತದೆ. ಅಲ್ಲದೆ ಸೂಕ್ಷ್ಮತೆಯಿಂದ ಕೂಡಿರುವ ವಿಡಂಬನೆಯು ಕಂಡುಬರುತ್ತದೆ.

ತನ್ನ ಬಾಲ್ಯಜೀವನದಲ್ಲಿ ಸತಿ ಸಾವಿತ್ರಿಯಂತೆ ಬಾಳಬೇಕು ಎಂದುಕೊಂಡಿದ್ದ ಸಾವಿತ್ರಿಯ

ಬದುಕಿನಲ್ಲಿ ಕೆಟ್ಟದಿನಗಳು ಸುಳಿಯಲಾರಂಭಿಸಿದವು. ಅದಕ್ಕೆ ಪೂರಕವಾಗಿ ಈಗಾಗಲೇ ತಾಯಿ ಇಲ್ಲವಾಗಿದ್ದಳು. ಇನ್ನು ತಮ್ಮನಾದ ತುಂಟ ಪುಟ್ಟುವಿಗೆ ಸಾವಿತ್ರಿಯೇ ತಾಯಿಯಾದಳು. ಪೋಷಣೆಯ ಜವಾಬ್ದಾರಿಯನ್ನು ಹೊತ್ತಳು. ಸಾವಿತ್ರಿಯ ಜವಾಬ್ದಾರಿಯಂತೆಯೇ ತಂದೆ ಲಕ್ಷ್ಮಣರಾಯರ ಜವಾಬ್ದಾರಿಯೂ ಮೊದಲಾಯಿತು. ಹನ್ನೊಂದು ವರ್ಷ ತುಂಬುತ್ತ ಬಂದ ಸಾವಿತ್ರಿಯ ಬಗ್ಗೆ ನೆಂಟರಲ್ಲಿ ಆಸಕ್ತಿ ಮೊದಲಾಯಿತು. ಈ ಕಾರಣದಿಂದ ಬಾಲ್ಯವಿವಾಹದ ಕೆಟ್ಟ ಪರಿಣಾಮಗಳು, ಬಾಲ್ಯವಿಧವೆಯರ ಗೋಳು, ಸಮಾಜದ ಕುಂದು ಕೊರತೆಗಳು ಮುಂತಾದವುಗಳ ವಿಚಾರಗಳು ಬೆಟ್ಟದಷ್ಟು ಗೊತ್ತಿದ್ದರೂ ಅವುಗಳನ್ನು ಮೀರಿ ನಡೆಯುವ ಧೈರ್ಯವಂತರಾಗಿರಲಿಲ್ಲ ಲಕ್ಷ್ಮಣರಾಯರು. ಹಾಗಾಗಿಯೇ ತಾವು ಕೆಲಸ ಮಾಡುವ ಕಚೇರಿಗೆ ಮೂರು ತಿಂಗಳ ರಜಾ ಹಾಕಿ ವರನ ಹುಡುಕಾಟಕ್ಕೆ ಮುಂದಾಗುತ್ತಾರೆ. ಇಲ್ಲಿ ತಂದೆ–ತಾಯಿಯರು ಮತ್ತು ಪೋಷಕರು ತಾವು ಎಲ್ಲ ವಿಷಯಗಳನ್ನು ತಿಳಿದುಕೊಂಡಿದ್ದರೂ ಇರುವ ಸಂಪ್ರದಾಯದ ಎಲ್ಲೆಯನ್ನು ಮೀರಿ ಏನೂ ಮಾಡಲಾಗದೇ ಅದೇ ಸಂಪ್ರದಾಯಕ್ಕೆ ಕಟ್ಟುಬೀಳುವ ಪರಿಸ್ಥಿತಿಯನ್ನು ಕಾಣುತ್ತೇವೆ. ಅಂತೂ ಗೋಪಾಲಸ್ವಾಮಿಯಂತಹ ಹಸನ್ಮುಖಿ ವರ ದೊರೆತಾಯಿತು. ಲಕ್ಷ್ಮಣರಾಯರಿಗೆ ಮೈಮೇಲಿದ್ದ ದೊಡ್ಡ ಭಾರವೊಂದು ಇಳಿದಂತಾಯಿತು. ಈ ನಡುವೆ 'ನಮ್ಮ ಗೋಪುಗೆ ತಾಯಿ ಇಲ್ಲದ ಹೆಣ್ಣು ಯಾಕೆ ತರಬೇಕು' ಎಂದಾಕೆ ಮತ್ತು 'ಹೆಣ್ಣು ಕೊಂಚ ಉದ್ದವಿರಬೇಕಾಗಿತ್ತು, ಪೀಚು' ಎಂದಾಕೆಗೆ ಗೋಪಾಲಕೃಷ್ಣನ ತಾಯಿ ಸಮಾಧಾನ ಹೇಳಿ ಸುಮ್ಮನಾಗಿಸಿದ್ದಳು.

ಗೋಪಾಲಕೃಷ್ಣನ ಅತ್ತೆ ನಾಗಮ್ಮಳು ಸಾವಿತ್ರಿಗೆ ಒಂದು ಹಾಡು ಹೇಳಲು ತಿಳಿಸಿದಾಗ ಸಾವಿತ್ರಿಯು 'ಕರುಣಾಕರ ನೀನೆಂಬುವುದೇಕೋ ಭರವಸೆಯಿಲ್ಲೆನಗೆ' ಎಂದು ಹಾಡಿ ಬಾಲ್ಯ ವಿವಾಹಕ್ಕೆ ಬಂಧಿಯಾದಳು. ಈ ನಡುವೆ ಲಕ್ಷ್ಮಣರಾಯರು ಮಕ್ಕಳನ್ನು ನೋಡಿಕೊಳ್ಳಲು, ತನ್ನ ಸುಖ–ದುಃಖ ಹಂಚಿಕೊಳ್ಳಲು, ಕಾಯಿಲೆ–ಕಸಾಲೆ ಆದರೆ ಪಾಲನೆ–ಪೋಷಣೆ ಮಾಡಲು ಯಾರಾದರೂ ಬೇಕಲ್ಲವೆ ಎಂದು ಯೋಚಿಸಿ ಇದಕ್ಕೆ ಮದುವೆಯೊಂದೇ ಪರಿಹಾರವಾಗಿ ತೋಚಿತು. ಮದುವೆಗೆ ಸನ್ನಾಹ ಮಾಡಲಾರಂಭಿಸಿದರು. 'ಸಮಾಜವೆಂಬ ಹೆಣ್ಣು ಮಾರುವ ಅಂಗಡಿಯಲ್ಲಿ ಲಕ್ಷ್ಮಣರಾಯರಂತಹ ಅನುಕೂಲಸ್ಥರಿಗೆ ತಕ್ಕ ಪದಾರ್ಥ ದೊರೆಯುವುದು ದುರ್ಲಾಭವೇನೂ' ಆಗಿರಲಿಲ್ಲ. ತುಸು ಅವಸರದಲ್ಲಿಯೇ ಮದುವೆ ನಡೆದುಹೋಯಿತು. ಸುಬ್ಬಮ್ಮನಿಗೆ(ಲಕ್ಷ್ಮಣರಾಯರ ಎರಡನೇ ಹೆಂಡತಿ) ವಯಸ್ಸು ಹನ್ನೆರಡೇ ಆಗಿದ್ದರೂ ಒಳ್ಳೆ ಬೆಳವಣಿಗೆಯಾಗಿದ್ದಳು. ತನ್ನ ಮಗಳಿಗೆ ಹನ್ನೊಂದನೇ ವಯಸ್ಸಿಗೆ ಬಾಲ್ಯವಿವಾಹ ಮಾಡಿ ಜವಾಬ್ದಾರಿ ಕಳೆದುಕೊಂಡ ಲಕ್ಷ್ಮಣರಾಯರು ತಾನು ಮಾತ್ರ ಹನ್ನೆರಡು ವರ್ಷದ ಬಾಲೆಯನ್ನು ಮದುವೆಯಾಗುತ್ತಾರೆ. ಹೆಚ್ಚು ಕಡಿಮೆ ಸಮಾನ ಮನಸ್ಕರಾದ, ಸಮಾನ ವಯಸ್ಕರಾದ ಸುಬ್ಬಮ್ಮ ಮತ್ತು ಸಾವಿತ್ರಿಯರು ಆಟಪಾಠಗಳಲ್ಲಿ ಕಾಲ ಕಳೆಯಬೇಕಾದವರು ತಾಯಿ–ಮಗಳಾಗುವುದು ಈ ಕಥೆಯ ದುರಂತ ಚಿತ್ರಣಗಳೊಂದಾಗಿ ಕಾಣುತ್ತದೆ. ಹಾಗೆಯೇ ತಂದೆಯ ವಯಸ್ಸಿನ ಲಕ್ಷ್ಮಣರಾಯರಿಗೆ ತನ್ನ ಮಗಳ ವಯಸ್ಸಿನ ಹುಡುಗಿ ಹೆಂಡತಿಯಾಗುವುದು ಇನ್ನೊಂದು ದುರಂತವಾಗಿ ಕಾಣುತ್ತದೆ.

ಹೆತ್ತತಾಯಿಯ ಸ್ಥಾನ ತುಂಬುವ ಮಲತಾಯಿ ಯಾವತ್ತಿದ್ದರೂ ಮಲತಾಯಿಯೇ ಎಂಬ ಹಾಗೆ ತನ್ನ ಚಿಕ್ಕಮ್ಮ ಸುಬ್ಬಮ್ಮ ಮತ್ತು ಸುಬ್ಬಮ್ಮಳ ತಾಯಿ ಗೌರಮ್ಮಳಿಂದ ಸಾವಿತ್ರಿ ಮತ್ತು ಸಾವಿತ್ರಿಯ ತಮ್ಮ ಪುಟ್ಟು ನಿತ್ಯವೂ ಮಲತಾಯಿ ಧೋರಣೆಯಿಂದ ನರಳಬೇಕಾಗುತ್ತದೆ. ಅಲ್ಲದೆ 'ಗಾಯದ ಮೇಲೆ ಮತ್ತೆ ಬರೆ' ಎಂಬ ಹಾಗೆ ಮದುವೆಯ ಒಟ್ಟರ್ಥ ತಿಳಿಯದ, ಗಂಡನೆಂದರೆ ಏನೆಂಬುದು ತಿಳಿಯದ

ಸಾವಿತ್ರಿ ವಿಧವೆಯಾಗುತ್ತಾಳೆ. 'ಅಯ್ಯೋ ನನ್ನ ಕಂದಾ, ಇನ್ನೂ ಹುಟ್ಟಲಿಲ್ಲ, ಬೆಳೆಯಲಿಲ್ಲ, ಬಾಳಲಿಲ್ಲ, ನಿನಗೀಗಲೇ ವೈಧವ್ಯ ಪ್ರಾಪ್ತವಾಯಿತೇ' ಎಂದು ಮರುಗುವ ತಂದೆಯ ಧ್ವನಿ ಒಂದು ಕಡೆಯಾದರೆ, 'ಈ ಶನಿ ನಮ್ಮ ಮನೆ ಬಿಟ್ಟು ತೊಲಗಿ ಹೋಗುತ್ತಿತ್ತೆಂದಿದ್ದರೆ ಜನ್ಮಕ್ಕೆ ಗಂಟು ಬಿತ್ತು' ಎಂಬ ಕ್ರೂರ ನುಡಿಗಳು ಸಾವಿತ್ರಿಗೆ ಯಾತನೆಯನ್ನುಂಟು ಮಾಡುವ ಮತ್ತೊಂದು ಬಗೆಯ ನಿಂದನೆಯ ನುಡಿಗಳಾಗುತ್ತವೆ.

ಸರ್ಕಾರದ ಕೆಲಸಕ್ಕೆಂದು ಲಕ್ಷ್ಮಣರಾಯರು ನಗರಕ್ಕೆ ಪ್ರಯಾಣ ಬೆಳೆಸಿದರು. ಮರುದಿನ ಬೆಳಗ್ಗೆ ಅಕಸ್ಮಾತಾಗಿ ಸುಬ್ಬಮ್ಮ 'ದೇವರ ಪಟವನ್ನು ನೋಡುವುದರ ಬದಲು ಸಾವಿತ್ರಿಯ ಮುಖ'ವನ್ನು ಕಂಡಳು. ಈ ಸುದ್ದಿಯನ್ನು ತನ್ನ ತಾಯಿಗೆ ತಿಳಿಸಿದಳು. ಆಗ ತಾಯಿ ಗೌರಮ್ಮ 'ಈಶ್ವರಾ, ಇವತ್ತು ನನ್ನ ಮಗೂಗೆ ಯಾವ ವಿಪತ್ತು ಬರದಿದ್ದರೆ ನಾಳೆ ಅಮಾವಾಸ್ಯೆ ದಿನ ನಿನಗೆ ಒಂದು ಸೇರು ಎಳ್ಳು, ಎರಡು ಸೇರು ಎಣ್ಣೆ ಕೊಡ್ತೀನಪ್ಪ' ಎಂದು ಹರಕೆ ಮಾಡಿಕೊಳ್ಳುತ್ತಾಳೆ. ಇಲ್ಲಿ ಬೆಳಗ್ಗೆ ವಿಧವೆಯರ ಮುಖ ನೋಡುವುದು ಅಪಶಕುನದ ಸಂಕೇತವಾಗಿ ಕಂಡುಬರುತ್ತದೆ. ಸ್ತ್ರೀಯು ತಾನು ಮಾಡದ ತಪ್ಪಿಗೆ ಸಮಾಜ ಮಾತ್ರ "ಸ್ತ್ರೀಯು ಮಾಡಿದ ಪಾಪ ಕರ್ಮಗಳಿಂದಲೇ ಆಕೆಯ ಗಂಡ ಬಲಿಯಾಗುತ್ತಾನೆ"[3] ಎಂದು ಬಿಂಬಿಸುತ್ತದೆ. ಅಲ್ಲದೆ ಗಂಡನನ್ನು ಕಳೆದುಕೊಂಡು ಬದುಕುವ ಸ್ತ್ರೀಯು ಒಳ್ಳೆಯ ಕೆಲಸ ಕಾರ್ಯಗಳಲ್ಲಿ ಭಾಗಿಯಾಗುವುದು, ಕೆಲಸದ ಸಲುವಾಗಿ ಹೊರಟಾಗ ಎದುರಾಗುವುದು 'ಅಪಶಕುನ' ಎಂದು ಬಿಂಬಿಸುತ್ತದೆ. ಇದಕ್ಕೆ ಯಾವ ಕಾಲದ ಸಮಾಜವೂ ಹೊರತಾಗಿಲ್ಲ. ಹಾಗಾಗಿಯೇ ಗಂಡನನ್ನು ಕಳೆದುಕೊಂಡ ಸ್ತ್ರೀಯನ್ನು ಬಹಳ ನಿಕೃಷ್ಟವಾಗಿ ನೋಡಲಾಗುತ್ತದೆ. ಇದಕ್ಕೆ ಹೊಂದಿಕೊಂಡಂತೆ ಅಂದು ಮಧ್ಯಾಹ್ನ ಸುಬ್ಬಮ್ಮ ಕೆರೆಯಿಂದ ನೀರು ತರುವಾಗ ತನ್ನ ನೆರಿಗೆ ಕಾಲಿಗೆ ಸಿಕ್ಕಿಕೊಂಡು ಬೀಳುತ್ತಾಳೆ. ಹಣೆಗೆ ಸ್ವಲ್ಪ ಪೆಟ್ಟಾಗಿ ರಕ್ತ ಸುರಿಯುತ್ತದೆ. ಇದರಿಂದ ಸುಬ್ಬಮ್ಮ ಅಳತೊಡಗುತ್ತಾಳೆ. ಇದನ್ನು ಕಂಡ ಗೌರಮ್ಮನ ಹೃದಯಕ್ಕೆ ಶೂಲ ನೆಟ್ಟಂತಾಗುತ್ತದೆ. 'ಬಿದ್ದವಳು ಪ್ರೇಮಪುತ್ರಿಯಾದ ಸುಬ್ಬೀ! ಅದಕ್ಕೆ ಕಾರಣ, ಬೆಳಗ್ಗೆ ಸಾವಿತ್ರಿಯ ಅನಿಷ್ಟಮುಖ ನೋಡಿದುದಕ್ಕಾಗಿ' ಎಂದುಕೊಂಡು ಮನೆಗೆ ಬಂದ ಗೌರಮ್ಮ 'ಅಯ್ಯೋ ಪೀಡೆ! ನಮ್ಮನೆ ಬ್ರಹ್ಮರಾಕ್ಷಸಿ, ನನ್ನ ಮಗಳನ್ನು ಇವತ್ತು ಬಲಿ ತಗೊಂಡ್ಯಾ.. ನಿನ್ನ ಮಕ ಬೆಳಗ್ಗೆ ನೋಡಿ ನನ್ನ ಕಂದ ತಲೆ ಬಡಿದುಕೊಂಡಿತು. ನೀನು ಬ್ರಹ್ಮ ರಾಕ್ಷಸಿ' ಎಂದು ಸಾವಿತ್ರಿಯ ಕೂದಲನ್ನು ಹಿಡಿದುಕೊಂಡು ಮನಸೋ ಇಚ್ಛೆ ಹೊಡೆಯುತ್ತಾಳೆ. ಬಿಡಿಸಿಕೊಳ್ಳಲು ಬಂದ ಸಾವಿತ್ರಿಯ ತಮ್ಮ ಪುಟ್ಟೂಗೂ ಬಡಿಯುತ್ತಾಳೆ. ಕೊನೆಗೆ ಸಾವಿತ್ರಿಯ ತಲೆಯಿಂದ ರಕ್ತ ಸುರಿಯತೊಡಗುತ್ತದೆ. ಇದನ್ನು ಕಂಡ ಪುಟ್ಟು 'ಅಯ್ಯೋ, ಬನ್ನಿ ಅಕ್ಕನನ್ನು ಕೊಂದು ಹಾಕಿಬಿಟ್ಟಳು' ಎಂದು ಚೀರುತ್ತಾನೆ. ಆಗ ಎದುರು ಮನೆಯವರು ಬಂದು ಸಾವಿತ್ರಿಯನ್ನು ಬಿಡಿಸಿಕೊಂಡು ಆರೈಕೆ ಮಾಡುವರು. ಸ್ಮರಣೆಯಿಲ್ಲದ ಅಕ್ಕನನ್ನು ಕಂಡ ಪುಟ್ಟು 'ಅಕ್ಕ ಸತ್ತುಹೋದಳೆಂದು ಭಾವಿಸಿಕೊಂಡು' ರೋದಿಸತೊಡಗಿದನು. ಪಕ್ಕದ ಮನೆಯ ಜೋಯಿಸರ ಮಗಳು ಕಮಲಮ್ಮ ಪುಟ್ಟುವನ್ನು ಸಂತೈಸುವಳು.

ಈ ಎಲ್ಲ ನೋವು ಸಂಕಟಗಳಿಂದ ಬೇಸತ್ತ ಸಾವಿತ್ರಿಯು ತನ್ನ ಅಮ್ಮನು ಹೋದ ದಾರಿಯನ್ನು ಹಿಡಿಯುತ್ತಾಳೆ. ಆಗ ತನ್ನಪ್ಪನಿಗೊಂದು ಪತ್ರವನ್ನು ಬರೆಯುತ್ತಾಳೆ. ಆ ಪತ್ರದಲ್ಲಿ 'ಅಪ್ಪ! ನಾನು ಯಾರಿಗೂ ಬೇಡವಾದ ವಸ್ತು. ಗಂಡನನ್ನು ಕಳೆದುಕೊಂಡ ನನ್ನ ಬಾಳು ನನಗೇ ಬೇಸರವಾಗಿತ್ತು. ಅಜ್ಜಿ, ಚಿಕ್ಕಮ್ಮ ಇವರ ಪ್ರೀತಿಯನ್ನು ಸಂಪಾದಿಸಲು ಯತ್ನಿಸಿದೆ, ಆದರೆ ಸಾಧ್ಯವಾಗಲಿಲ್ಲ. ಈ ಬಡಪ್ರಾಣಿಯ ಮೇಲೆ ಅವರಿಗೆ ಕರುಣೆಯೇ ಹುಟ್ಟಲಿಲ್ಲ. ನನಗಿದ್ದವರು ನೀವೊಬ್ಬರು, ಪುಟ್ಟು ಒಬ್ಬ. ಈಗ ನಿಮ್ಮನ್ನು ಬಿಟ್ಟು ಹೋಗುತ್ತೇನೆ. ನಾನೆಲ್ಲಿ ಎಂದು ಪುಟ್ಟು ಕೇಳಿದರೆ ಅಮ್ಮನನ್ನು ಹುಡುಕುತ್ತಾ

ಹೋದಳೆಂದು ತಿಳಿಸಿ, ನಾನು ಮಾಡುತ್ತಿರುವುದು ಒಳ್ಳೆಯದೋ, ಕೆಟ್ಟದೋ ಗೊತ್ತಿಲ್ಲ. ಎಲ್ಲವನ್ನು ತಿಳಿದ ನೀವು ನಿಮ್ಮ ಮಗಳ ತಪ್ಪನ್ನು ಕ್ಷಮಿಸುತ್ತೀರೆಂದು ನಂಬಿದ್ದೇನೆ. ಜನ್ಮ ಜನ್ಮಕ್ಕೂ ನೀವೇ ನನ್ನ ತಂದೆಯಾಗಬೇಕು. ಅಮ್ಮನೇ ಅಮ್ಮನಾಗಬೇಕು. ಪುಟ್ಟುವೇ ತಮ್ಮನಾಗಬೇಕು. ಇದೇ ಭಗವಂತನಲ್ಲಿ ನನ್ನ ಪ್ರಾರ್ಥನೆ. ನಿರ್ಭಾಗ್ಯೆಯಾದ ನಿಮ್ಮ ಮಗಳು ಸಾವಿತ್ರಿ'. ಇಲ್ಲಿ ಸಾವಿತ್ರಿಯು ತನಗೆ ದೊರೆತ ದೌರ್ಭಾಗ್ಯವನ್ನು ಮತ್ತು ತನ್ನ ಕೋರಿಕೆಯನ್ನು ಹೇಳುತ್ತ ಕ್ಷಮೆ ಕೇಳುತ್ತಾಳೆ. ದುರಂತ ಅಂತ್ಯವನ್ನು ಕಾಣುತ್ತಾಳೆ.

ಮಲತಾಯಿ ಧೋರಣೆಗೆ ಒಳಗಾದ ತನ್ನ ಅಕ್ಕ ಸಾವಿತ್ರಿಯಲ್ಲಿಯೇ ತನ್ನ ತಾಯಿಯನ್ನು ಕಾಣುತ್ತಿದ್ದ ಪುಟ್ಟನು ಕೊರಗಿ ಕೊರಗಿ ಅಕ್ಕ ಮತ್ತು ಅಮ್ಮನ ಹಾದಿಯನ್ನೇ ಹಿಡಿಯುತ್ತಾನೆ. ಆಗೋ! ಅಗೋ! ಅವಳು ಅಕ್ಕ! ಅಕ್ಕನು ಬಂದಿರುವಳು. ಅಕ್ಕನ ಎದೆಯಿಂದ ರಕ್ತ ಬರುತ್ತಿದೆ. ಯಾರೋ ಅವಳನ್ನು ಹೊಡೆದಿರುವರು. ಎದೆಯನ್ನು ಒರೆಸುತ್ತಾ, 'ಅಯ್ಯೋ ಸಮಾಜವೇ' ಎಂದನ್ನುತ್ತಿರುವಳಪ್ಪ. 'ಸಮಾಜ ಹೊಡೆಯಿತಂತೆ'. ಅಕ್ಕನನ್ನು ನಾನು ಸಂತೈಸುತ್ತೇನಪ್ಪಾ. ಇಗೋ ಹೊರಟೆ, ಹೊರಟೆ ಎಂದು ರೋದಿಸುವ ಪುಟ್ಟ ಬಾಲಕನ ಮಾತುಗಳಲ್ಲಿ ಸಮಾಜ ಮಾಡಿದ ಘೋರತೆ ಕಂಡುಬರುತ್ತದೆ. ಇಲ್ಲಿ ವಿಧವೆಗೆ ತನ್ನ ಕುಟುಂಬದವರು ಮತ್ತು ಸಮಾಜದ ಸದಸ್ಯರು ಕೊಟ್ಟ ನೋವು ಸಂಕಟಗಳು ಚಿತ್ರಣವಾಗಿವೆ.

ಕೊನೆಟಿಪ್ಪಣಿಗಳು

1. ತಿಮ್ಮೇಗೌಡ, ಎಚ್.ಆರ್. *ಕನ್ನಡ ಪ್ರಗತಿಶೀಲ ಸಾಹಿತ್ಯದ ಸಣ್ಣ ಕಥೆಗಳು.* ಪು–188.
2. ಮಹೇಂದ್ರ, ಎಂ. *ಅ.ನ.ಕೃ ಅವರ ಕಥೆಗಳು.* ಪು–149.
3. ಅದೇ ಪುಸ್ತಕ, ಪು–153.

ಪರಾಮರ್ಶನ ಗ್ರಂಥಗಳು:

- ಬೆಳ್ಳೂರು ವೆಂಕಟಪ್ಪ. (2011). *ಪ್ರಗತಿಶೀಲ ಕಥನ.* ಧಾತ್ರಿ ಪುಸ್ತಕ.
- ಚಂದ್ರಶೇಖರ್, ಕೆ.ಟಿ. (2005). *ಅ.ನ.ಕೃ.ಅವರ ಸಮಗ್ರ ಕಥೆಗಳು.* ಸಾಗರ್ ಪ್ರಕಾಶನ.
- ಕೃಷ್ಣರಾಯ, ಶಾ.ಮಂ. (2016). *ಅ.ನ.ಕೃಷ್ಣರಾಯ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಕೃಷ್ಣರಾಯ, ಅ.ನ. (2004). *ಸಾಹಿತ್ಯ ಮತ್ತು ಕಾಮಪ್ರಚೋದನೆ,* ಸಾಗರ್ ಪ್ರಕಾಶನ.
- ಕೃಷ್ಣರಾಯ, ಅ.ನ. (2006). ಸಾಹಿತ್ಯ ಮತ್ತು ಜೀವನ, ಸಾಗರ್ ಪ್ರಕಾಶನ.
- ಮಹೇಶ, ಎಂ. (2018). *ಅ.ನ.ಕೃ. ಅವರ ಕಥೆಗಳು.* ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
- ನರಹಳ್ಳಿ ಬಾಲಸುಬ್ರಹ್ಮಣ್ಯ. (2018). *ಅ.ನ.ಕೃ. ಮತ್ತು ಕನ್ನಡ ಸಂಸ್ಕೃತಿ.* ಅಭಿನವ ಪ್ರಕಾಶನ.
- ಸುದೀಪ್ ಬಿ.ಎಸ್. (2011). *ಅ.ನ.ಕೃ. ಕಾದಂಬರಿಗಳ ಸ್ತ್ರೀವಾದಿ ಅಧ್ಯಯನ.* ರೂಪ ಪ್ರಕಾಶನ.
- ಸುಬ್ಬರಾವ್ ತ.ರಾ. (2011). *ಅ.ನ.ಕೃ.* ಹೇಮಂತ ಸಾಹಿತ್ಯ ಪ್ರಕಾಶನ.
- ತಿಮ್ಮೇಗೌಡ, ಎಚ್.ಆರ್. (2011). *ಕನ್ನಡ ಪ್ರಗತಿಶೀಲ ಸಾಹಿತ್ಯದ ಸಣ್ಣ ಕಥೆಗಳು.* ಈಶ್ವರಿ ಪ್ರಕಾಶನ.